**ದಿನಾಂಕ 10-2-2021 ರಂದು ಬೆಳಗ್ಗೆ 11.10 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 47ನೇ ಸಭೆಯ (ತುರ್ತು ಸಭೆ) ನಡವಳಿಗಳು:**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆ, | ಸದಸ್ಯರು | ವರ್ಚುವಲ್ |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ರಾಮಕೃಷ್ಣ, ಆರ್., ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 5. | ಶ್ರೀ ಕೊಟ್ರಪ್ಪ ಬಿ. ಕೋರೇರ, ರಾಯಚೂರು | ಸದಸ್ಯರು | ಭೌತಿಕ |
| 6. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ಭೌತಿಕ |
| 7. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ಭೌತಿಕ |
| 8. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ಭೌತಿಕ |
| 9. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 10. | ಡಾ|| ಎಂ.ಆರ್. ದಿನೇಶ್, ನಿರ್ದೇಶಕರು, ಐ.ಐ.ಹೆಚ್.ಆರ್. ಬೆಂಗಳೂರು (ಐಸಿಎಆರ್ ನಿಂದ ನಾಮನಿರ್ದೇಶಿತ) | ಸದಸ್ಯರು | ವರ್ಚುವಲ್ |
| 11. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ವರ್ಚುವಲ್ ಮತ್ತು ಭೌತಿಕವಾಗಿ ಹಾಜರಿದ್ದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಿಗೆ ಸ್ವಾಗತ ಕೋರಿದರು ಹಾಗೂ ತುರ್ತು ಸಭೆಯನ್ನು ಕರೆಯಲು ಕಾರಣವನ್ನು ತಿಳಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| **ಐಟಂ-1** | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಐಐಐಟಿ ಕೇಂದ್ರವನ್ನು ಸ್ಥಾಪಿಸಲು ಹಾಗೂ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಹಾಗೂ ಸ್ನಾತಕ ಪೂರ್ವ ಕೇಂದ್ರವನ್ನು ಸ್ಥಾಪಿಸಲು ಕ್ರಮವಾಗಿ 10 ಎಕರೆ ಜಮೀನನ್ನು ಒದಗಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಐಐಐಟಿ ಕೇಂದ್ರವನ್ನು ಸ್ಥಾಪಿಸಲು ಅನುಕೂಲವಾಗುವಂತೆ ಹಾಗೂ ನೂತನ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಹಾಗೂ ಸ್ನಾತಕ ಪೂರ್ವ ಕೇಂದ್ರವನ್ನು ಸ್ಥಾಪಿಸಲು ಕ್ರಮವಾಗಿ ಸರ್ವೆ ನಂ. 335 ಮತ್ತು ಸರ್ವೆ ನಂ. 333 ರಲ್ಲಿ 6 ರಿಂದ 9 ಎಕರೆ ಜಮೀನನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ 13 (3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವರ್ಗಾಯಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br><br>**(ಕ್ರಮ : ಕುಲಸಚಿವರು)** |

| | |
|---|---|
| ಐಟಂ–2 | **ಬೀಜ ಘಟಕ, ಕೃವಿವಿ., ರಾಯಚೂರಿನಲ್ಲಿ 2020–21ನೇ ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳಿಗೆ ಬೇಕಾಗುವ ಹಣಕಾಸಿನ ಅನುಮೋದನೆ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಮುಖ್ಯ ಆವರಣದ ಬೀಜ ಘಟಕದಲ್ಲಿ ಹಾಗೂ ವಿವಿಧ ಕೇಂದ್ರಗಳಲ್ಲಿ 2020–21 ನೇ ಸಾಲಿನಲ್ಲಿ ವಿವಿಧ ಬೆಳೆಗಳ ಬೀಜೋತ್ಪಾದನಾ ಕಾರ್ಯಕ್ರಮಗಳನ್ನು ರೈತರ ಸಹಭಾಗಿತ್ವ ಯೋಜನೆಯಡಿ ಅನುಷ್ಠಾನಗೊಳಿಸಲು ತಗಲುವ ವೆಚ್ಚದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. |

| ಕ್ರ. ಸಂ | ಹಣಕಾಸಿನ ಮೂಲ | ಪ್ರಮಾಣ (ಕ್ವಿಂ) | ಮೊತ್ತ (ರೂ. ಲಕ್ಷಗಳಲ್ಲಿ) | ಆವರ್ಥನಿಧಿ / ಲೆಕ್ಕ ಶೀರ್ಷಿಕೆ ಸಂಖ್ಯೆ. |
|---|---|---|---|---|
| 1. | ಬೀಜ ಆವರ್ತನಿಧಿ, ಬೀಜ ಘಟಕ, ಕೃವಿವಿ., ರಾಯಚೂರು | 2719 | 212.53 | 8637 |
| 2. | ಬೀಜ ಯೋಜನೆ (ಬೇಳೆ ಕಾಳು), ಬೀಜ ಘಟಕ, ಕೃವಿವಿ., ರಾಯಚೂರು | 1450 | 109.00 | 8621 |
| 3. | ಬೀಜ ಕೇಂದ್ರ ಯೋಜನೆ (ಸೋಯಾ ಅವರೆ), ಬೀಜ ಘಟಕ, ಕೃವಿವಿ., ರಾಯಚೂರು | 600 | 36.58 | 8635 |
| 4. | ಬೀಜ ಯೋಜನೆ (ಬೇಳೆ ಕಾಳು), ಕೃಷಿ ವಿಜ್ಞಾನ ಕೇಂದ್ರ, ಬೀದರ್ | 750 | 55.00 | 8622 |
| 5. | ಬೀಜ ಯೋಜನೆ (ಬೇಳೆ ಕಾಳು), ಕೃಷಿ ವಿಜ್ಞಾನ ಕೇಂದ್ರ, ಬೀದರ್ | 675 | 55.17 | 8623 |
| 6. | ಬೀಜ ಆವರ್ತನಿಧಿ, ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ | 850 | 64.87 | 8576 |
| 7. | ಬೀಜ ಆವರ್ತನಿಧಿ, ಕೃಷಿ ಸಂಶೋಧನಾ ಕೇಂದ್ರ, ಹಗರಿ | 195 | 12.61 | 8614 |
| | ಒಟ್ಟು | **7239** | **545.76** | |

**(ಕ್ರಮ : ವಿಶೇಷಾಧಿಕಾರಿಗಳು (ಬೀಜ))**

| | |
|---|---|
| ಐಟಂ–3 | **2019–20 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಪ್ರೋತ್ಸಾಹ ಧನ ನೀಡಲು ಹಣಕಾಸಿನ ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, 2018–19 ನೇ ಸಾಲಿನಲ್ಲಿ ತೆಗೆದುಕೊಂಡ ಬೀಜೋತ್ಪಾದನೆಗೆ 2020–21ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಪ್ರೋತ್ಸಾಹ ಧನವನ್ನು ಈ ಕೆಳಕಂಡಂತೆ ಕೋಷ್ಟಕದಲ್ಲಿ ತೋರಿಸಿದಂತೆ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. |

| **ಕ್ರ.ಸಂ.** | **ಹಣಕಾಸಿನ ಮೂಲ** | **ಪ್ರಮಾಣ (ಕ್ವಿಂ)** | **ಮೊತ್ತ (ಲಕ್ಷಗಳಲ್ಲಿ)** | **ಆವರ್ತ ನಿಧಿ / ಲೆಕ್ಕ ಶಿರ್ಷಿಕೆ** |
|---|---|---|---|---|
| 1. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ | 1284.71 | 53.44393 | 7411/903 |

**(ಕ್ರಮ : ವಿಶೇಷಾಧಿಕಾರಿಗಳು (ಬೀಜ))**

| | |
|---|---|
| ಐಟಂ–4 | **ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರತಿ ಉಪಕರಣಗಳ ಖರೀದಿಗೆ ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. |

| Sl. No. | Name of the item | Name of the Department/ Project | Ab.A/c. No. | Qty | Appr. Cost (Rs. in Lakhs) | Remarks |
|---|---|---|---|---|---|---|
| 1. | Atomic Absorption Spectrophotometer | Department of Soil Sciences, AC, Raichur under Soil Health Mission Programme | 7525/701 | 01 | 18.50 | For Strengthening of Soil testing laboratories under the Soil Health Mission Programme. |
| 2. | Water Soluble fertilizer (Urea-Phosphate, NPK: 17-44-00) | Farm superintendent ZARS, Kalaburagi | 8624/502 | 50 Tons | 32.50 | Operation for production of pulse Magic which to is being sold to farmer to reduce flower and pod drop and to enhance productivity in pulse crop. |

**(ಕ್ರಮ : ಸರಕು ಖರೀದಿ ಅಧಿಕಾರಿಗಳು)**

**ಐಟಂ–5** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಪರಿಕಲ್ಪನೆ ಹಾಗೂ ನೀಲಿ ನಕ್ಷೆಗಳ ತಯಾರಿಕೆಗಾಗಿ ತಾಂತ್ರಿಕ ಸಲಹೆಗಾರರು / ವಾಸ್ತು ಶಿಲ್ಪಿಗಳನ್ನು ನಿಯೋಜನೆ ಮಾಡಿಕೊಳ್ಳಲು ಕರೆದ ಟೆಂಡರ್ ಅನುಮೋದನೆಗೆ ಕುರಿತು.**

**ಠರಾವು:**

ಚರ್ಚೆಯ ನಂತರ, ಆರ್ಥಿಕ ಬಿಡ್‌ನಲ್ಲಿ ಕನಿಷ್ಠ ದರಗಳನ್ನು ನಮೂದಿಸಿದ ಮೂರು ತಾಂತ್ರಿಕ ಸಲಹೆಗಾರರಾದ ಮೆ॥ ಟ್ರಾನ್ಸೆಟ್ ಕನ್ಸಲ್ಟನ್ಸಿ ಪ್ರೇವೇಟ್ ಲಿಮಿಟೆಡ್. ಬೆಂಗಳೂರು, ಮೆ॥ ವಿಶ್ವಾಸ ಕನ್ಸಲ್ಟನಿ, ಶಿವಮೊಗ್ಗ ಮತ್ತು ಮೆ॥ ಇಕ್ಕಾ ಅಸೋಸಿಯೆಟ್ಸ್, ಬೆಂಗಳಗೂರು ಇವರುಗಳನ್ನು ವಿಶ್ವವಿದ್ಯಾಲಯದ ಪ್ಯಾನಲ್‌ನಲ್ಲಿ ನೇಮಿಸಿಕೊಂಡು ವಿಶ್ವವಿದ್ಯಾಲಯದ ಅವಶ್ಯಕತೆ ಅನುಸಾರ ಹಾಗೂ ತಾಂತ್ರಿಕ ಸಲಹೆಗಾರರ ನೈಪುಣ್ಯತೆಗನುಗುಣವಾಗಿ ಅವರವರು ಒಪ್ಪಿದ ಕನಿಷ್ಠ ದರಗಳಂತೆ ಕನ್ಸೆಲ್ಟನ್ಸಿ ಕೆಲಸವನ್ನು ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಆಸ್ತಿ ಅಧಿಕಾರಿಗಳು)**

**ಐಟಂ–6** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಮೂರನೇ ತಂಡದ ಪರಿವೀಕ್ಷಣೆಗೆ ತಾಂತ್ರಿಕ ಸಲಹೆಗಾರರನ್ನು ನಿಯೋಜನೆ ಮಾಡಿಕೊಳ್ಳಲು ಕರೆದ ಟೆಂಡರ್ ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿವಿಧ ಆವರಣಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಫೈನಾನ್ಸಿಯಲ್ ಬಿಡ್‌ನಲ್ಲಿ ಅತೀ ಕಡಿಮೆ ದರ ನಮೂದಿಸಿದ ಸಂಸ್ಥೆ **ASTER Engineering Consultants, Belagavi** ಇವರನ್ನು **ಮೂರನೇ ತಂಡದ ಪರಿವೀಕ್ಷಣೆ ಸಲಹೆಗಾರರನ್ನಾಗಿ** ವಿಶ್ವವಿದ್ಯಾಲಯದ ಪ್ಯಾನಲ್‌ನಲ್ಲಿ ನೇಮಿಸಿಕೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಆಸ್ತಿ ಅಧಿಕಾರಿಗಳು)**

**ಐಟಂ–7** **ಡಾ. ಹೆಚ್.ವಿ. ರುದ್ರಮೂರ್ತಿ, ಸಹಾಯಕ ಪ್ರಾಧ್ಯಾಪಕರು (ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರ ಅರ್ಹ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.**

**ಠರಾವು:**

ಚರ್ಚೆಯ ನಂತರ, ಡಾ. ಹೆಚ್.ವಿ. ರುದ್ರಮೂರ್ತಿ, ಸಹಾಯಕ ಪ್ರಾಧ್ಯಾಪಕರು (ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರು ಹಿಂದಿನ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ 6 ವರ್ಷ 8 ತಿಂಗಳ ಹಿಂದಿನ ಸೇವೆಯನ್ನು ಸಿ.ಎ.ಎಸ್–2006 ರ ನಿಯಮಾವಳಿಗಳನ್ವಯ ಪರಿಗಣಿಸಿ, ಪದೋನ್ನತಿ ನೀಡುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಆಡಳಿತಾಧಿಕಾರಿಗಳು)**

| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು** |
|---|---|
| 1 | **ಹಳೆ ವಿದ್ಯಾರ್ಥಿಗಳ ಸಂಘ (ರೀ.), ಕೃಷಿ ಮಹಾವಿದ್ಯಾಲಯ ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ, ಕೃವಿವಿ., ರಾಯಚೂರು ಇವರಿಗೆ ಅರ್ಧ ಎಕರೆ ಭೂಮಿಯನ್ನು ಹಂಚಿಕೆ ಮಾಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಹಳೆ ವಿದ್ಯಾರ್ಥಿಗಳ ಸಂಘ (ರೀ.), ಕೃಷಿ ಮಹಾವಿದ್ಯಾಲಯ ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ ಕೃವಿವಿ., ರಾಯಚೂರು ಇವರಿಗೆ ಕಛೇರಿ ಕಟ್ಟಡ ಹಾಗೂ ಇತರೆ ಸೌಲಭ್ಯಗಳಿಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಅರ್ಧ ಎಕರೆ ಭೂಮಿಯನ್ನು ಹಂಚಿಕೆ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು / ಆಸ್ತಿ ಅಧಿಕಾರಿಗಳು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 16-2-2021 | ಸಹಿ /- 16-2-2021 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.